ಇ) ಅವುಗಳಲ್ಲಿ ಬಾದಾಮಿ ತಾಲ್ಲೂಕಿನಿಂದ ಬಂದ ಅರ್ಜಿಗಳ ಸಂಖ್ಯೆ ಎಷ್ಟು;
ಈ) ಈ ಅರ್ಜಿಗಳು ನಿಗಮದಲ್ಲಿ ಎಷ್ಟು ಸಮಯದಿಂದ ಬಾಕಿ ಉಳಿದಿರುವುವು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ಹೌದು. ನಿಗಮವು ರಾಜ್ಯದ ಎಲ್ಲಾ 20 ಜಿಲ್ಲೆಗಳಲ್ಲಿಯೂ ಜಿಲ್ಲಾ ಕಛೇರಿಯನ್ನು ಹೊಂದಿದೆ.
ಆ) 1991–92ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 525 ಅರ್ಜಿಗಳನ್ನು ದಿನಾಂಕ 26.2.92 ರವರೆವಿಗೆ ಸ್ವೀಕರಿಸಲಾಗಿದೆ.
ಇ) 8 ಅರ್ಜಿಗಳು
ಈ) ಈ ಅರ್ಜಿಗಳನ್ನು ಜಿಲ್ಲಾ ಕಛೇರಿಯಲ್ಲಿ ಜನವರಿ 92 ರಲ್ಲಿ ಸ್ವೀಕೃತವಾಗಿದ್ದು ಇವುಗಳನ್ನು ಕರ್ನಾಟಕ ಕೃಷಿ ಕೈಗಾರಿಕಾ ನಿಗಮಕ್ಕೆ ಜಲಬಿಂದು ಗುರುತಿಸಲು ನೀಡಲಾಗಿದೆ. ಇದರ ಜೊತೆಗೆ ಹಿಂದಿನ ವರ್ಷಗಳಲ್ಲಿ ಬಂದ 239 ಅರ್ಜಿಗಳನ್ನು ಕೂಡ ಕರ್ನಾಟಕ ಕೃಷಿ ಕೈಗಾರಿಕಾ ನಿಗಮಕ್ಕೆ ಜಲಬಿಂದು ಗುರುತಿಸಲು ಕಳುಹಿಸಲಾಗಿದೆ.

ಉತ್ತರಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು.

1050. ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು?
ಆ) ಹೊನ್ನಾವರ ಭಟ್ಕಳ ತಾಲ್ಲೂಕುಗಳಲ್ಲಿ ವೈದ್ಯರಿಲ್ಲದ ಆಸ್ಪತ್ರೆಗಳು ಯಾವುವು?
ಇ) 1991 ಜೂನ್ 30 ರ ನಂತರ ಎಷ್ಟು ವೈದ್ಯರನ್ನು ಜಿಲ್ಲೆಯ ಹೊರಗೆ ವರ್ಗಾಯಿಸಲಾಗಿದೆ ಹಾಗೂ ಯಾವ ಆಸ್ಪತ್ರೆಗಳಿಂದ ವರ್ಗಾಯಿಸಲಾಯಿತು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) 29
ಆ) ಭಟ್ಕಳ ತಾಲ್ಲೂಕಿನ ಹೊಸಾಡ್ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಮಾತ್ರ.
ಇ) 12 ವೈದ್ಯರನ್ನು ವರ್ಗಾಯಿಸಲಾಗಿದೆ.

1.	ಪ್ರಾಥಮಿಕ ಆರೋಗ್ಯ ಕೇಂದ್ರ,	ಕ್ಯಾದಗಿ
2.	ಸಾರ್ವಜನಿಕ ಆಸ್ಪತ್ರೆ, ಸಿರ್ಸಿ	2
3.	ಪ್ರಾಥಮಿಕ ಆರೋಗ್ಯ ಕೇಂದ್ರ,	ವಜ್ರಹಳ್ಳಿ.
4.	ಜಿಲ್ಲಾ ಆಸ್ಪತ್ರೆ, ಕಾರವಾರ	2
5.	ಪ್ರಾಥಮಿಕ ಆರೋಗ್ಯ ಕೇಂದ್ರ ,	ಬಳಕೂರ್
6.	ಪ್ರಾಥಮಿಕ ಆರೋಗ್ಯ ಕೇಂದ್ರ,	ಅಮ್ಮಳ್ಳಿ.
7.	ಪ್ರಾಥಮಿಕ ಆರೋಗ್ಯ ಕೇಂದ್ರ,	ಹಿರೇಗುತ್ತಿ.
8.	ಪ್ರಾಥಮಿಕ ಆರೋಗ್ಯ ಕೇಂದ್ರ,	ರಾಮನಗರ.
9.	ಪ್ರಾಥಮಿಕ ಆರೋಗ್ಯ ಕೇಂದ್ರ,	ಸಿದ್ದಾಪೂರ.
10.	ಪ್ರಾಥಮಿಕ ಆರೋಗ್ಯ ಕೇಂದ್ರ,	ಬಂಕಿಕೊಡ್ಲೆ.